ಕಾಲೇಜಿನ ಹೆಸರು	ವಿದ್ಯಾರ್ಥಿಗಳ ಸಂಖ್ಯೆ		
	ವಿಜ್ಞಾನ	ಕಲಾ	ವಾಣಿಜ್ಯ
ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ	17	258	103
ಪ್ರಥಮ ದರ್ಜೆ ಮಹಿಳಾ ಕಾಲೇಜು, ವಿಜಯನಗರ	–	50	–

ಇ)

ಕಾಲೇಜಿನ ಹೆಸರು	ಕೊರಡಿಗಳ ಸಂಖ್ಯೆ		
	ಹಾಲಿ ಇರುವ	ಅಗತ್ಯ ಇರುವ	ಕೊರತೆ ಇರುವ
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು	40	20	20
ಮಹಾರಾಣಿ ಮಹಿಳಾ ಕಲಾ ಕಾಲೇಜು	27	57	30
ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ	11	23	12
ಪ್ರಥಮ ದರ್ಜೆ ಮಹಿಳಾ ಕಾಲೇಜು, ವಿಜಯನಗರ	6	–	–

ಈ) ರಾಜ್ಯ ವಲಯ ಯೋಜನೆಯಡಿ 2006–07ನೇ ಸಾಲಿಗೆ ರೂ 9 00 ಕೋಟಿಗಳನ್ನು ಒದಗಿಸಲಾಗಿದೆ

ಅಪೆಂಡಿಕ್ಸ್–ಇ ಅಡಿಯಲ್ಲಿಯೂ 16 31 ಕೋಟಿಗಳ ಅನುದಾನವನ್ನು 2006–07ನೇ ಸಾಲಿಗೆ ಒದಗಿಸಲಾಗಿದೆ

542(866) ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್ (ಗೌರಿಬಿದನೂರು) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಕೋಲಾರ ಜಿಲ್ಲೆ, ಗೌರಿಬಿದನೂರು ತಾಲ್ಲೂಕಿನಲ್ಲಿ ನೀರಾವರಿಯ ಸೌಕರ್ಯವು ಇಲ್ಲದೇ ರೈತರು ಕಂಗಾಲಾಗಿದ್ದು, ಕುಡಿಯಲು ಸಹ ನೀರು

ಇಲ್ಲದೇ ಜಾನುವಾರುಗಳು ಸಾರ್ವಜನಿಕರು ಪ್ರತಿ ವರ್ಷ ಬೇಸಿಗೆ ಕಾಲದಲ್ಲಿ ಸಂಕಷ್ಟಕ್ಕೀಡಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ, ಗೌರಿಬಿದನೂರು ತಾಲ್ಲೂಕಿನಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖಾವತಿಯಿಂದ ನೀರಿನ ತೊಂದರೆ ಜನತೆಗೆ ಆಗದಂತೆ ಅಣೆಕಟ್ಟೆಯನ್ನು ನಿರ್ಮಿಸುವ ಯೋಜನೆಯು ಸರ್ಕಾರದ ಮುಂದಿದೆಯೇ, ಹಾಗಿದ್ದರೆ ಇದಕ್ಕೆ ವ್ಯಯ ಮಾಡುತ್ತಿರುವ ಅನುದಾನವೇನು,

ಇ) ಜಲಸಂಪನ್ಮೂಲ ಇಲಾಖಾ ವತಿಯಿಂದ ಗೌರಿಬಿದನೂರು ತಾಲ್ಲೂಕಿನಲ್ಲಿ ನೀರಾವರಿಯ ಸೌಕರ್ಯವನ್ನು ಶಾಶ್ವತವಾಗಿ ಜನತೆಗೆ ಒದಗಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು, ಇದರ ಅಭಿವೃದ್ಧಿಗೆ ಬಿಡುಗಡೆ ಮಾಡಿದ ಅನುದಾನವೇನು?

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಅ) 2002–03ರಲ್ಲಿ ಗೌರಿಬಿದನೂರು ತಾಲ್ಲೂಕಿನಲ್ಲಿ ಉತ್ತರ ಪಿನಾಕಿನಿ ನದಿಗೆ ಕಿಂಡಿ ಅಣೆಕಟ್ಟೆಯನ್ನು ರೂ 120 00 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ ಈ ಯೋಜನೆಯಡಿ ಗೌರಿಬಿದನೂರು ತಾಲ್ಲೂಕಿನ ಮರಳೂರು ದೊಡ್ಡಕೆರೆ, ಇಡಗೂರು ದೊಡ್ಡಕೆರೆ ಮತ್ತು ಚಂದನದೂರು ದೊಡ್ಡಕೆರೆ, ಮಧುಗಿರಿ ತಾಲ್ಲೂಕಿನ ಶ್ರಾವಂಡನ ಹಳ್ಳಿ ಕೆರೆ ಮತ್ತು ಎಕಾರ್ಲಹಳ್ಳಿ ಕೆರೆಗಳಿಗೆ ನೀರನ್ನು ಒದಗಿಸಲು ಮತ್ತು ಮಧುಗಿರಿ ತಾಲ್ಲೂಕಿನ 350 ಎಕರೆ ಪ್ರದೇಶಕ್ಕೆ ಮತ್ತು ಗೌರಿಬಿದನೂರು ತಾಲ್ಲೂಕಿನ 1215 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವುದರ ಜೊತೆಯಲ್ಲಿ ಜನಜಾನುವಾರುಗಳಿಗೆ ಬೇಸಿಗೆಯಲ್ಲಿ ಕುಡಿಯುವ ನೀರಿನ ತೊಂದರೆ ಸ್ವಲ್ಪಮಟ್ಟಿಗೆ ನಿವಾರಣೆಯಾಗುತ್ತಿದೆ

ಆ) ಈ ತಾಲ್ಲೂಕಿಗೆ ನೀರಾವರಿಯನ್ನು ಒದಗಿಸಲು ಜಲಸಂಪನ್ಮೂಲ ಇಲಾಖೆಯ (ಭಾರಿ ಮತ್ತು ಮಧ್ಯಮ ನೀರಾವರಿ) ಮುಂದೆ ಯಾವುದೇ ಅಣೆಕಟ್ಟು ನಿರ್ಮಿಸುವ ಯೋಜನೆಯು ಇರುವುದಿಲ್ಲ ಆದುದರಿಂದ, ಈ ಕುರಿತು ಅನುದಾನಗಳ ಮೇಲಣ ವೆಚ್ಚಗಳ ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಬರಪೀಡಿತ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಶ್ರೀ ಜಿ ಎಸ್ ಪರಮಶಿವಯ್ಯ, ನಿವೃತ್ತ ಅಧೀಕ್ಷಕ ಅಭಿಯಂತರರು ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯ ವರದಿಯಂತೆ, ನೇತ್ರಾವತಿ ನದಿಯಲ್ಲಿ

ಹರಿಯುವ ಹೆಚ್ಚುವರಿ ನೀರನ್ನು ಪೂರ್ವಕ್ಕೆ ತಿರುಗಿಸಿ, ರಾಜ್ಯದ ಮಧ್ಯಭಾಗದ ಬರಪೀಡಿತ ಜಿಲ್ಲೆಗಳಿಗೆ ಮಾಲಾ ಕಾಲುವೆಗಳಿಂದ ನೀರನ್ನು ಸಂಗ್ರಹಿಸಿ, ಸೇವಾ ಕಾಲುವೆಗಳಿಂದ ಗುರುತ್ವಾಕರ್ಷಣೆಯ ಮೂಲಕ ನೀರನ್ನು ಒದಗಿಸುವ ಯೋಜನೆಯಲ್ಲಿ ಗೌರಿಬಿದನೂರು ತಾಲ್ಲೂಕು ಸಹ ಒಳಗೊಂಡಿದೆ ಈ ಯೋಜನೆಯ ಸರ್ವೆ, ತನಿಖೆ ಮತ್ತು ವಿವರವಾದ ಯೋಜನಾ ವರದಿಯ ತಯಾರಿಕೆಯ ಕಾರ್ಯವನ್ನು ಭಾರತ ಸರ್ಕಾರದ ಸ್ವಾಮ್ಯ ಸಂಸ್ಥೆಯಾದ ಮೆ ಎನ್ ಆರ್ ಎಸ್ ಎ, ಹೈದರಾಬಾದ್ ಇವರಿಗೆ ವಹಿಸಲಾಗಿದ್ದು, ಮಾಲಾ ಕಾಲುವೆಯ ವೈಮಾನಿಕ ಸಮೀಕ್ಷೆ ಕಾರ್ಯವು ಮುಗಿದಿದೆ ಸೇವಾ ಕಾಲುವೆಯ ವೈಮಾನಿಕ ಸಮೀಕ್ಷೆ ಪೂರ್ಣಗೊಂಡಿರುವುದಿಲ್ಲ ವಿವರವಾದ ಯೋಜನಾ ವರದಿ ಬಂದ ನಂತರ ಈ ಕುರಿತು ತಾಂತ್ರಿಕವಾಗಿ ಪರಿಶೀಲಿಸಿ, ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲಾಗುವುದು

543(867) ಶ್ರೀ ಎನ್ ಹೆಚ್ ಶಿವಶಂಕರ್ ರೆಡ್ಡಿ (ಗೌರಿಬಿದನೂರು) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖಾ ವ್ಯಾಪ್ತಿಯಲ್ಲಿರುವ ರಸ್ತೆಗಳು ಹದಗೆಟ್ಟು, ರೈತಾಪಿ ವರ್ಗದವರ, ನಾಗರೀಕರು, ಜಾನುವಾರುಗಳ ಸಂಚಾರಕ್ಕೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ, ಹಲವಾರು ಗ್ರಾಮಗಳಲ್ಲಿ ರಸ್ತೆಗಳು ದುಸ್ಥಿತಿಯಲ್ಲಿದ್ದು, ಇದರ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮವೇನು ಹಾಗೂ ರಸ್ತೆಯ ದುರಸ್ತಿಗೆ ಬಿಡುಗಡೆ ಮಾಡಲಾದ ಅನುದಾನವೇನು, (ವಿವರವಾರು ಒದಗಿಸುವುದು)

ಇ) ಗ್ರಾಮೀಣ ಭಾಗದ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಸರ್ಕಾರ ಯಾವುದಾದರೂ ಯೋಜನೆಯನ್ನು ತಯಾರಿಸಿದೆಯೇ, ಈ ಯೋಜನೆಯ ಉದ್ದೇಶವೇನು, ಇದನ್ನು ಜಾರಿಗೆ ತಂದು ಸರ್ಕಾರವು ಗ್ರಾಮೀಣ ಭಾಗದ ಜನತೆಗೆ ಅನುಕೂಲ ಯಾವಾಗ ಮಾಡಿಕೊಡುವುದು?